ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 3, Nov-Dec 2020, 17-20
©IIMRD, Mysuru
IIMRD JOURNALS
www.iimrd.com

# ಅಂಬೇಡ್ಕರ್ ಆಶಯದತ್ತ ಬೆಂಗಳೂರಿನ ನಾಗಸೇನ ಬುದ್ಧವಿಹಾರ

ಡಾ. ರೇವಣ್ಣ. ಎನ್ ಗಂಗವಾಡಿ.[1]

**ಪೀಠಿಕೆ**

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶಕಂಡ ಅಪ್ರತಿಮ ಜ್ಞಾನಿ. ಅಂಬೇಡ್ಕರ್‌ರವರು ಹೇಳುವಂತೆ ಮನುಷ್ಯ ನೈತಿಕವಾಗಿ ಬದುಕಲು ಧರ್ಮ ಅತ್ಯವಶ್ಯಕ. 'ಧರ್ಮ ಇರುವುದು ಆತ್ಮಗಳ ಉಳಿವಿಗಾಗಿ ಅಲ್ಲ; ಮಾನವನ ಕಲ್ಯಾಣಕ್ಕಾಗಿ, ಸಮಾಜದ ಸಂರಕ್ಷಣೆಗಾಗಿ. ಬಹುಶಃ ಧರ್ಮದ ಬಗ್ಗೆ ಅವರಷ್ಟು ದೀರ್ಘವಾದ ಅಧ್ಯಯನ ನಡೆಸಿದವರು ಮತ್ತೊಬ್ಬರಿಲ್ಲ. ಆ ಮುಖೇನವಾಗಿ ಭಾರತದಲ್ಲಿದ್ದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಲು ಬೌದ್ಧಧಮ್ಮದಿಂದ ಮಾತ್ರ ಸಾಧ್ಯ ಎಂಬುದು ಅಂಬೇಡ್ಕರ್‌ರವರ ಅರಿವಾಗಿತ್ತು. ಹಾಗಾಗಿ ಹಿಂದೂ ಧರ್ಮವನ್ನು ತ್ಯಜಿಸುವ ನಿರ್ಧಾರವನ್ನು 1935 ಅಕ್ಟೋಬರ್ 13ರಂದು ನಾಸಿಕ್‌ನ ಇಯೋಲಾ ಸಮ್ಮೇಳನದಲ್ಲಿ ತೆಗೆದುಕೊಂಡರು. ಅಂದಿನಿಂದ 21 ವರ್ಷಗಳ ಕಾಲ ಜಗತ್ತಿನ ಧರ್ಮಗಳ ಬಗ್ಗೆ ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದರು.

ಅಂಬೇಡ್ಕರ್ ಅವರಿಗೆ ಹಿಂದಿನಿಂದಲೂ ಬೋಧಿ ಪ್ರಜ್ಞೆಯ ಬಗ್ಗೆ ತುಂಬಾ ಕಾಳಜಿ ಇತ್ತು. ಆದ್ದರಿಂದ ಅಕ್ಟೋಬರ್ 14, 1956 ರಂದು ಬೌದ್ಧಧಮ್ಮವನ್ನು ಅಪ್ಪಿಕೊಂಡರು. ದಲಿತರ ವಿಮೋಚನೆಗಾಗಿ ಅಂಬೇಡ್ಕರ್ ಆಯ್ದುಕೊಂಡ ಬೌದ್ಧಧರ್ಮವೂ ಜಗತ್ತಿನಲ್ಲಿ ಸರಳವೂ, ಮಾನವೀಯವೂ, ವೈಚಾರಿಕವೂ ಆದ ಧರ್ಮವಾಗಿದೆ.

ಅಂಬೇಡ್ಕರ್‌ರವರು ಬೌದ್ಧಧರ್ಮವನ್ನು ಭಾರತ ದೇಶದಲ್ಲಿ ಪುನರ್‌ಜ್ಜೀವನಗೊಳಿಸಿದವರಲ್ಲಿ ಪ್ರಮುಖರು. ರಾಷ್ಟ್ರದ ಉದ್ದಗಲಕ್ಕೂ ಸಂಚರಿಸಿ ಬೌದ್ಧಧರ್ಮದ ಬೆಳವಣಿಗೆಗೆ ಶ್ರಮಿಸಿದ ಅಂಬೇಡ್ಕರ್‌ರವರು ಕರ್ನಾಟಕದಲ್ಲಿಯೂ ಕೂಡ ಬೌದ್ಧಧರ್ಮ ನೆಲೆಗೊಳ್ಳಲು ಕಾರಣೀಭೂತರಾಗಿದ್ದರು. ಧಾರ್ಮಿಕ ಚಿಂತನೆ ಅಂಬೇಡ್ಕರ್ ಅವರಲ್ಲಿದ್ದರಿಂದ ಕರ್ನಾಟಕದಲ್ಲಿ ಬೌದ್ಧಧಮ್ಮ ಕೇಂದ್ರವನ್ನು ತೆರೆಯಲು ಉದ್ದೇಶ ಹೊಂದಿದ್ದರು. ಹಾಗಾಗಿ ಇಲ್ಲಿ ಬುದ್ಧಿಸ್ಟ್ ಸೆಮಿನರಿ ಮತ್ತು ಬೌದ್ಧ ಚಿಂತನೆಯ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವ ಆಶಯವಿತ್ತು. ಇಂಥ ಕಾಲ ಸಂದರ್ಭದಲ್ಲಿ ಅಂಬೇಡ್ಕರ್ ಭೂಮಿಯ ಹುಡುಕಾಟವನ್ನು ಮಾಡುತ್ತಿದ್ದರು. 1954ರಲ್ಲಿ ಅಂಬೇಡ್ಕರ್ ಬೆಂಗಳೂರಿಗೆ ಬಂದಿದ್ದರು. ಅಂದಿನ ಕರ್ನಾಟಕದ ರಾಜ್ಯಪಾಲರಾಗಿದ್ದ ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್‌ರವರು ಕಾನೂನು ಸಲಹೆಗಾಗಿ ಅಂಬೇಡ್ಕರ್ ಅವರನ್ನು ಖುದ್ದು ಭೇಟಿಯಾದರು. ಆ ಸಂದರ್ಭದಲ್ಲಿ ಅಂಬೇಡ್ಕರ್ ಮನಸ್ಸಿನಲ್ಲಿದ್ದ ಬೌದ್ಧ ಪ್ರಜ್ಞೆಯನ್ನು ಒಡೆಯರ್ ಜೊತೆ ಹಂಚಿಕೊಂಡು ಭೂಮಿಯನ್ನು ಪಡೆಯಲು

---

[1] *ಗಂಗವಾಡಿ, ಯಳಂದೂರು ತಾಲೂಕು, ಚಾಮರಾಜನಗರ ಜಿಲ್ಲೆ.*

ಕೋರಿಕೆ ಸಲ್ಲಿಸಿದರು. ಅಂಬೇಡ್ಕರ್‌ರವರ ಬೇಡಿಕೆಗೆ ಮಾನ್ಯತೆ ನೀಡಿ ಬೆಂಗಳೂರಿನಲ್ಲಿ ತಮಗೆ ಸಂಬಂಧಿಸಿದ 5 ಎಕರೆ 244 ಚದುರ ಅಡಿ ಭೂಮಿಯನ್ನು ದಾನವಾಗಿ ನೀಡಿದರು. ನಂತರ ಅಂಬೇಡ್ಕರ್‌ರವರು ತಮ್ಮ ಹೆಸರಿಗೆ ಭೂಮಿಯನ್ನು ಪಡೆದು ಬೆಂಗಳೂರು ತಾಲೂಕಿನ ಉಪನೊಂದಾವಣೆ ಇಲಾಖೆಯ ನಂ 111/54–55ರಲ್ಲಿ ನೊಂದಾಯಿಸಿದರು. ಈ ಧಮ್ಮ ಭೂಮಿಯು ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಾದ ಇಂದಿನ ರಾಜಮಹಲ್ ವಿಲಾಸ್ ಎಕ್ಸಟೆನ್ಸ್‌ನ ಸದಾಶಿವನಗರದಲ್ಲಿದೆ.

ಭೂಮಿಯ ಹಸ್ತಾಂತರದ ನಂತರ ದಿನಾಂಕ: 12–1–1955 ಗುರುವಾರದಂದು ಅಂಬೇಡ್ಕರ್‌ರವರು ದೆಹಲಿಯಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಈ ಭೂಮಿಯನ್ನು ಪಡೆದುಕೊಂಡ ಸದುದ್ದೇಶಗಳ ಬಗ್ಗೆ ತಿಳಿಸಿದರು. ಈ ಜಾಗದಲ್ಲಿ ಅಂತರಾಷ್ಟ್ರೀಯ ಬೌದ್ಧ ಮಂದಿರವನ್ನು ನಿರ್ಮಿಸಿ ಬೌದ್ಧ ಸೆಮಿನರಿ ಪ್ರಾರಂಭಿಸಲಾಗುವುದು ಎಂದು ಹೇಳಿದರು. ಹಾಗೂ ಮೈಸೂರಿನ ರಾಜಪ್ರಮುಖರು ಬೆಂಗಳೂರಿನ ಎರಡು ಪ್ರಸಿದ್ಧ ಕಲಿಕಾ ಕೇಂದ್ರಗಳಾದ ರಾಮನ್ ಇನ್ಸ್‌ಸ್ಟಿಟ್ಯೂಟ್ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ನಡುವೆ ಇದ್ದ ಜಾಗವನ್ನು ದಾನವಾಗಿ ನೀಡಿದ್ದಾರೆಂಬ ಮಾಹಿತಿಯನ್ನು ಹಂಚಿಕೊಂಡಿದ್ದರು. ಹಾಗೂ ಎರಡು ಬಾರಿ ಬರ್ಮಾ ದೇಶಕ್ಕೆ ಬೇಟಿ ನೀಡಿದ್ದು, ವರ್ಲ್ಡ್ ಬುದ್ಧಿಸ್ಟ್ ಮಿಶನ್ ಮತ್ತು ಬುದ್ಧ ಶಾಸನ ಕೌನ್ಸಿಲ್‌ರವರು ಹಣಕಾಸಿನ ಮತ್ತು ತಾಂತ್ರಿಕವಾದ ಎಲ್ಲಾ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದ್ದಾರೆಂಬ ಮಾಹಿತಿಯನ್ನು ನೀಡಿದರು. ಹಾಗೂ ಆರ್ಥಿಕ ಸಹಾಯಕ್ಕಾಗಿ ದೇಶದಾದ್ಯಂತ ಅನೇಕ ಜನರನ್ನು ಯಶಸ್ವಿಯಾಗಿ ಅನುಸಂಧಾನ ಮಾಡಿದ್ದೇನೆ ಮತ್ತು ಸಾರ್ವಜನಿಕರಿಂದ ಸಹಾಯಕ್ಕಾಗಿ ಭಿಕ್ಷಾಪಾತ್ರೆ ಬಳಸಿಕೊಂಡು ಭಿಕ್ಷಾಟನೆಯನ್ನು ಕೂಡಲೇ ಆರಂಭಿಸಲಾಗುವುದೆಂದು ಡಾ. ಅಂಬೇಡ್ಕರ್ ಅವರು ಪ್ರಕಟಿಸಿದರು.

ಪ್ರಪಂಚದಲ್ಲಿನ ಶ್ರೇಷ್ಠ ವಿದ್ವಾಂಸರ ಒಂದು ತಂಡ ಪಾಳಿ ಮತ್ತು ಇತರ ಭಾಷೆಗಳಲ್ಲಿರುವ ಬೌದ್ಧ ಗ್ರಂಥಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸುವ ಕಾರ್ಯದಲ್ಲಿ ನಿರತವಾಗಿದೆ ಮತ್ತು ಅವುಗಳನ್ನು ಸೆಮಿನರಿ ಪ್ರಕಟಿಸುತ್ತದೆ. ಧರ್ಮ ಮತ್ತು ತತ್ವಶಾಸ್ತ್ರದ ಪುಸ್ತಕಗಳನ್ನು ಹೊಂದಲಿರುವ ದೊಡ್ಡ ಗ್ರಂಥಾಲಯವು ಸೆಮಿನರಿಯ ಮತ್ತೊಂದು ಲಕ್ಷಣವಾಗಲಿದೆ. ಅಲ್ಲಿ ಧ್ಯಾನ ಮಂದಿರ, ತರಗತಿ ಕೊಠಡಿಗಳು ಮತ್ತು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಂಶೋಧನಾ ವಿದ್ವಾಂಸಕರಿಗೆ ವಸತಿ ನಿಲಯಗಳು ಇರಲಿವೆ ಎಂಬ ಅಂಶವನ್ನು ತಿಳಿಸಿದರು.

ಅಂಬೇಡ್ಕರ್ ನಂತರ 1977ರಲ್ಲಿ ಪಿ.ಇ.ಎಸ್. ಟ್ರಸ್ಟ್ ಮೆಂಬರ್ ಆಗಿದ್ದ ಬಿ. ಬಸವಲಿಂಗಪ್ಪ ಅವರು ಅದರ ನೇತೃತ್ವವನ್ನು ವಹಿಸಿಕೊಂಡರು. 1984 ರಂದು ಬಿ. ಬಸವಲಿಂಗಪ್ಪರವರು ಮುಂಬಯಿಯ ದ ಪೀಪಲ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದರು. ಇವರು ಈ ಭೂಮಿಯಲ್ಲಿ ಬುದ್ಧವಿಹಾರವನ್ನು ಕಟ್ಟಲು ಅಡಿಪಾಯ ಹಾಕಿದರು. ಮತ್ತು ನಾಗಸೇನಾ ವಿದ್ಯಾಲಯ ಶಾಲೆಯನ್ನು ಮೇ 29, 1984 ರಂದು ಸ್ಥಾಪಿಸಿದರು. ನಾಗಸೇನಾ ವಿದ್ಯಾಲಯವನ್ನು ದಲೈಲಾಮರವರು ಜನವರಿ 19, 1992 ರಂದು ಉದ್ಘಾಟನೆ ಮಾಡಿದರು. ಈ ವಿದ್ಯಾಲಯದಲ್ಲಿ ನರ್ಸರಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು ಇದ್ದರು.

ಇವರು ಡಿಸೆಂಬರ್ 27, 1992ರವರೆಗೆ ಇದರ ಮೊಟ್ಟ ಮೊದಲ ಅಧ್ಯಕ್ಷರಾಗಿ ಬಿ. ಬಸವಲಿಂಗಪ್ಪರವರು, ಉಪಾಧ್ಯಕ್ಷರಾಗಿ ಎ.ಎಸ್. ಕುಪ್ಪರಾಜು, ಕಾರ್ಯದರ್ಶಿಯಾಗಿ ಎಸ್.ಎಸ್. ಅರ್ಕೆರಿ ಇದ್ದರು. ಅಂಬೇಡ್ಕರ್‌ರವರ ಹೆಜ್ಜೆಗಳತ್ತ ಸಾಗಿ ಬುದ್ಧ ಧರ್ಮವನ್ನು ಸ್ವೀಕರಿಸುವ ಗುರಿಯತ್ತ ದಲಿತರನ್ನು ಒಗ್ಗೂಡಿಸುವ ಮಹತ್ವದ ಕೆಲಸವನ್ನು ಬಿ. ಬಸವಲಿಂಗಪ್ಪರವರು. ಮಾಡಿದವರು ನಂತರ 28–12–1992 ರಿಂದ 18–10–2011 ರವರೆಗೆ ಅಧ್ಯಕ್ಷರಾಗಿ ಕೆ.ಎಚ್. ರಂಗನಾಥ್‌ರವರು ಇದ್ದರು. ಇವರ ಅವಧಿಯಲ್ಲಿ ಬುದ್ಧವಿಹಾರ ಸ್ಥಾಪಿಸಿದರು. ಅಲ್ಲದೆ ಬುದ್ಧವಿಹಾರದ ಕೆಳಗೆ ವಿಶೇಷ ಉಪನ್ಯಾಸದ ಗ್ರಂಥಾಲಯ ಇದಕ್ಕೆ ಹೊಂದಿಕೊಂಡಂತೆ ಇರುವ ಅಧ್ಯಯನ ಕೇಂದ್ರದ ಜೊತೆಗೆ ಧ್ಯಾನ ಮಂದಿರದ ಕಟ್ಟಡಗಳು ನಿರ್ಮಾಣವಾಗಿವೆ. ಬುದ್ಧವಿಹಾರವು 1985ರ ಜನವರಿಯಲ್ಲಿ ಶಿಲಾನ್ಯಾಸವಾಗಿ ದಿನಾಂಕ: 14–10–2008 ರಲ್ಲಿ ಉದ್ಘಾಟನೆಯಾಗಿದೆ. ಈ ವಿಹಾರದ ಮೊಟ್ಟ ಮೊದಲ ಭಂತೇಜಿಯಾಗಿ ಬುದ್ಧ ಪ್ರಕಾಶ್ ಭಂತೇಜಿ 2010ರವರೆಗೆ ಇದ್ದರು. ಪ್ರಸ್ತುತ ಅನಿರುದ್ಧ ಭಂತೇಜಿ ಇದ್ದು ಅವರು ಹೋಗಿದ್ದಾರೆ. ಇಲ್ಲಿ ಉಳಿದಿರುವ ಭಂತೇ ಭಿಕ್ಕುಣಿ ಬುದ್ಧ ಅಮ್ಮ ಅವರು ಇದ್ದಾರೆ.

ಈ ವಿಹಾರದಲ್ಲಿ ಪ್ರತಿದಿನ ಬೆಳಿಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ ಮತ್ತು ಸಂಜೆ 6–30 ರಿಂದ 7–30ರವರೆಗೆ ಧ್ಯಾನ ಕಾರ್ಯ ನಡೆಯುತ್ತಿದೆ. ಅಲ್ಲದೆ ಪ್ರತಿ ಹುಣ್ಣಿಮೆ ದಿನ, ಬುದ್ಧಜಯಂತಿ, ಅಂಬೇಡ್ಕರ್ ಜನ್ಮದಿನ, ಅಂಬೇಡ್ಕರ್ ಬೌದ್ಧದೀಕ್ಷೆ ಪಡೆದ ದಿನ, ಅಂಬೇಡ್ಕರ್ ಪರಿನಿಬ್ಬಾಣ ದಿನ, ಧಮ್ಮ ಚಕ್ಕಪವತ್ತನ ದಿನ, ಧಮ್ಮ ದೀಪ ಕಾರ್ಯಕ್ರಮ ಮತ್ತು ದೀಕ್ಷಾ ಕಾರ್ಯಕ್ರಮಗಳು ನಡೆಯುತ್ತವೆ. ಈ ವಿಹಾರವು ಪ್ರಸ್ತುತ ಕ್ರಿಯಾಶೀಲವಾಗಿ ಕೆಲಸವನ್ನು ನಿರ್ವಹಿಸುತ್ತಿದೆ. ಇದು ಅಂಬೇಡ್ಕರ್ ಅವರೆ ಸ್ಥಾಪಿಸಿರುವುದರಿಂದ ಇದೊಂದು ಸ್ಫೂರ್ತಿಯ ಧಾಮವಾಗಿ ಮಹತ್ವವನ್ನು ಪಡೆದಿದೆ.

ಇದರ ಪ್ರಸ್ತುತ ಅಧ್ಯಕ್ಷರಾಗಿ ದಿನಾಂಕ; 19–10–2011ರಿಂದ ಪಿ.ಎಲ್. ನಂಜುಂಡಸ್ವಾಮಿ, ಉಪಾಧ್ಯಕ್ಷರಾಗಿ ಡಾ.ಎಂ. ವೆಂಕಟಸ್ವಾಮಿ, ಕಾರ್ಯದರ್ಶಿಯಾಗಿ ಎಸ್. ವಿಜಯಕುಮಾರ್. ಪೀಪಲ್ ಎಜುಕೇಷನ್ ಸೊಸೈಟಿಯ ಬಾಂಬೆ ಮೆಂಬರ್ ಆಗಿ ಎಸ್.ಆರ್. ಕೃಷ್ಣಪ್ಪ ಇವರು 1996 ರಿಂದಲೂ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ವಿದ್ಯಾಲಯದಲ್ಲಿ ಅರುಣಾಚಲ ಪ್ರದೇಶದ 9 ವಿದ್ಯಾರ್ಥಿಗಳು ಮಾಂಕ್ ಆಗಿದ್ದಾರೆ. ಇವರಿಗೆ ಊಟ, ವಸತಿ ಹಾಗೂ ಇವರ ಸಂಪೂರ್ಣ ಜವಾಬ್ದಾರಿ ಟ್ರಸ್ಟ್‌ನವರದ್ದಾಗಿದೆ. ಪ್ರತಿ ಹುಣ್ಣಿಮೆಯನ್ನು ವಿದ್ಯಾರ್ಥಿಗಳೊಟ್ಟಿಗೆ ಆಚರಿಸುತ್ತಾರೆ. ಇಲ್ಲಿನ ಬೌದ್ಧವಿಹಾರವು ಒಂದು ಸುಂದರವಾದ ನಳಂದ ಜ್ಞಾನ ವಿಶ್ವವಿದ್ಯಾಲಯದ ರೂಪದಲ್ಲೇ ಗ್ರಂಥಾಲಯವನ್ನು ಹೊಂದಿದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಬುದ್ಧವಿಹಾರವನ್ನು ಸ್ಥಾಪನೆ ಮಾಡಬೇಕು, ಬೌದ್ಧಧರ್ಮವನ್ನು ಪ್ರಚಾರ ಮಾಡಬೇಕು ಎನ್ನುವಂತಹ ಆಶಯಗಳನ್ನು ಇಟ್ಟುಕೊಂಡಿದ್ದನ್ನು ಕಾಣುತ್ತೇವೆ. ಇಂದು ಕರ್ನಾಟಕದ ಹಲವಾರು ಕಡೆ ಇವರ ಪ್ರೇರಣೆಯಿಂದ ಬೌದ್ಧ ವಿಹಾರಗಳು ಸ್ಥಾಪನೆಯಾಗಿರುವುದನ್ನು ಗಮನಿಸಬಹುದು. ಕರ್ನಾಟಕದಲ್ಲಿ ಬೌದ್ಧಧರ್ಮವನ್ನು ಪ್ರಸಾರ

ಮಾಡುವಲ್ಲಿ ಪ್ರಮುಖ ಪಾತ್ರವಹಿಸಿರುವ 50ಕ್ಕೂ ಹೆಚ್ಚು ಬೌದ್ಧವಿಹಾರಗಳು ಕರ್ನಾಟಕದಲ್ಲಿರುವುದನ್ನು ಕಾಣಬಹುದಾಗಿದೆ. ಬೌದ್ಧ ವಿಹಾರಗಳು ಕರ್ನಾಟಕದಾದ್ಯಂತ ಅಂಬೇಡ್ಕರ್ ಮತ್ತು ಬುದ್ಧರ ತತ್ವ ಸಿದ್ಧಾಂತಗಳನ್ನು ಈ ಸಮಾಜದಲ್ಲಿರುವ ಜನಸಮುದಾಯಗಳಿಗೆ ಪ್ರೇರಣೆಯಾಗಿದೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಭಾರತದಲ್ಲಿ ಬೌದ್ಧ ಧರ್ಮದ ಪುನರಜ್ಜೀವನಕ್ಕೆ ಅಂಬೇಡ್ಕರ್‌ರವರ ಕೊಡುಗೆ ಅಪಾರವಾದುದಾಗಿದೆ.

**ಪರಾಮರ್ಶನ ಗ್ರಂಥಗಳು**


- ವರ್ಧನ್ ಬಿ.ಕೆ.ಎಸ್. (2014). ಕರ್ನಾಟಕದಲ್ಲಿ ಬೌದ್ಧಧರ್ಮದ ಪುನರುಜ್ಜೀವನ. ಶಿಕ್ಷಣ ಸಂಗ್ರಾಮ ಪ್ರಕಾಶನ, ಧಾರವಾಡ
- ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ . (12 ಜನವರಿ 1955). ಪತ್ರಿಕಾಗೋಷ್ಠಿಯ ಕರಪತ್ರ
- ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಜಯಚಾಮರಾಜೇಂದ್ರ ಒಡೆಯರ್‌ರವರು ಬೆಂಗಳೂರಿನಲ್ಲಿ ಬೌದ್ಧ ಕೇಂದ್ರ ತೆರೆಯಲು ನೀಡಿದ ಭೂಮಿಗೆ ನೀಡಿದ ದಾಖಲೆಗಳು.


**ವಕ್ತೃ ವಿವರ**

- ಕುಮಾರಸ್ವಾಮಿ ಎ ಎನ್. ವಯಸ್ಸು 38, ಆಲೂರು, ಚಾಮರಾಜನಗರ ಜಿಲ್ಲೆ, ಸಂದರ್ಶನ ದಿನಾಂಕ: 20–09–2018
- ಕೃಷ್ಣಪ್ಪ ಎಸ್.ಆರ್. ವಯಸ್ಸು 80, ನಾಗಸೇನಾ ಬೌದ್ಧವಿಹಾರ, ಬೆಂಗಳೂರು, ಸಂದರ್ಶನ ದಿನಾಂಕ: 24–10–2018
- ಶಿವಣ್ಣ. ವಯಸ್ಸು 42, ಸಾರನಾಥ ಬೌದ್ಧವಿಹಾರ, ಚಾಮರಾಜನಗರ, ಸಂದರ್ಶನ ದಿನಾಂಕ: 08–9–2017

IIMRD JOURNALS